# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ ಭಾಲ್ಕಿ

## ಸಿ. ಸಿ. ಸಂಖ್ಯೆ:246/2020

**ಚಾಸಾ-5 ಪ್ರಾಸಾ-8**

ದಿನಾಂಕ**: 20/05/2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

ಸಾಕ್ಷಿದಾರರ ಹೆಸರು : ಶೀಲಸಾಗರ

ತಂದೆ ಹೆಸರು : ಶಿವರಾಜ

ವಯಸ್ಸು : 38 ವರ್ಷ

ಉದ್ಯೋಗ : ಪಿ.ಸಿ.

ವಾಸಸ್ಥಳ : ಹುಮನಾಬಾದ

ಮುಖ್ಯ ವಿಚಾರಣೆ**:** ಸ**.** ಸ**.** ಅ**.** ರವರಿಂದ

2013 ರಿಂದ 2017 ರವರೆಗೆ ಪಿ. ಸಿ ಆಗಿ ಭಾಲ್ಕಿ ನಗರ ಪೋಲಿಸ ಠಾಣೆಯಲ್ಲಿ ಸೇವೆ ಸಲ್ಲಿಸಿದ್ದೇನೆ. ಆರೋಪಿತರನ್ನು ನಾನು ನೋಡಿರುತ್ತೆನೆ.

ದಿನಾಂಕ: 30/09/2015 ರಂದು ನಾನು ಮತ್ತು ಚಾಸಾ- 06, 08, 07 ಮತ್ತು 09 ಹಾಗೂ ಚಾಸಾ -04 ರವರು ಸೇರಿ ಭಾಲ್ಕಿ ಕೆರೆಯ ಹತ್ತಿರ ಗಸ್ತು ಕರ್ತವ್ಯಲ್ಲಿದಾಗ ಗಾಂಧಿ ಚೌಕ ಹತ್ತಿರ 3 ನೇ ಆರೋಪಿ,

15 ನೇ ಆರೋಪಿ, 25 ನೇ ಆರೋಪಿ, 17 ನೇ ಆರೋಪಿ, 11 ನೇ ಆರೋಪಿ, 08 ನೇ ಆರೋಪಿ, 16 ನೇ ಆರೋಪಿ , 07 ನೇ ಆರೋಪಿ, 03 ನೇ ಆರೋಪಿ, 02 ನೇ ಆರೋಪಿ, 1 ನೇ ಆರೋಪಿ ಹಾಗೂ ಇತರರು ಕೂಡಿಕೊಂಡು ಅಕ್ರಮ ಕೂಟ ರಚಿಸಿ ಜೈಯಘೋಷ ಹಾಕುತ್ತಾ ಅಂಗಡಿ ಮುಗಟುಗಳನ್ನು ಬಂದ್ ಮಾಡಿಸುತ್ತಿದ್ದರು. ಅದನ್ನು ವಿಡಿಯೋ ಚಿತ್ರಿಕರಣ ಮಾಡಿಕೊಳ್ಳಲಾಗಿತ್ತು. ಸದರಿ ವಿಡಿಯೋವನ್ನು ಸಾಕ್ಷಿದಾರರ ಸಮಕ್ಷಮದಲ್ಲಿ ನೋಡಿ ಆರೋಪಿತರನ್ನು ಗುರುತಿಸಿರುತ್ತೆವೆ ಮತ್ತು ಆ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೆನೆ.

ಕೃತ್ಯಯ ಎಸಗಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೆನೆ. 23 ಮತ್ತು 28 ನೇ ಆರೋಪಿತರು ಹಾಜರಿದ್ದು, ಅವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರನ್ನು ಗುರುತಿಸುವ ಬಗ್ಗೆ ಅವರ ಪರ ವಕೀಲರಿಂದ ಯಾವುದೇ ತಕರಾರು ಇಲ್ಲ ಎನ್ನುತ್ತಾರೆ.

<u>ಪಾಟೀ ಸವಾಲು**: 28** ನೇ ಆರೋಪಿಯ ಪರ ಶ್ರೀ**.**ಎಲ್**.**ಎಲ್**.**ಟಿ ವಕೀಲರಿಂದ**:**</u>

ಗಾಂಧಿ ಚೌಕ ಹತ್ತಿರ ಖಾಯಂ ಪೋಲಿಸ ಚೌಕಿ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಚೌಕಿಯಲ್ಲಿ ಖಾಯಂ ಆಗಿ ಇಬ್ಬರು ಪೋಲಿಸರು ಕುಳಿತುಕೊಳ್ಳುತ್ತಾರೆ ಹಾಗೂ ಆ ವಿಷಯ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಂಧಿ ಚೌಕದಲ್ಲಿ ಗಲಭೆ ಆಗುತ್ತಿರುವ ಕುರಿತು ನನಗಾಗಲೀ ಅಥವಾ ನನ್ನ ಹಿರಿಯ ಅಧಿಕಾರಿಗಳಿಗಾಗಲೀ ಯಾವುದೇ ಮಾಹಿತಿ ಬಂದಿರಲಿಲ್ಲ. ಯಾರು ಯಾವ ಅಂಗಡಿಯನ್ನು

ಬಲವಂತವಾಗಿ ಮುಚ್ಚಿಸಿದರು ಎಂದು ಹೇಳಲು ಆಗುವುದಿಲ್ಲ. ಆರೋಪಿತರ ಹೆಸರುಗಳು ಹೇಗೆ ಗೋತಾಯಿತು ಎಂದರೆ ಸಾಕ್ಷಿಯು ವಿಡಿಯೋ ಮೂಲಕ ಎನ್ನುತ್ತಾರೆ. ವಿಡಿಯೋವನ್ನು ಯಾರು ಚಿತ್ರಿಕರಣ ಮಾಡಿದ್ದಾರೆ ಎಂದು ಗೊತ್ತಿಲ್ಲ. ಆರೋಪಿತರು ಘಟನೆ ಸ್ಥಳದಲ್ಲಿ ಇರಲಿಲ್ಲ, ಮೇಲಾಧಿಕಾರಿಗಳ ಮಾತು ಕೇಳಿ, ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದಕ್ಕೆ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಘಟನೆ ಸ್ಥಳದಲ್ಲಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು: ಉಳಿದ ಆರೋಪಿತರ ಪರ ಅವರ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದರಿಂದ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆ: ಇಲ್ಲ.

**( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ. ಹೇ. ಕೇ. ಸರಿ ಇದೆ.**

**ಜೆ. ಎಮ್. ಎಫ್. ಸಿ, ಭಾಲ್ಕಿ**